**ನನ್ನ ಮಿತಿಯಲ್ಲಿ ಮನೆಯೆಂದರೆ ವಸ್ತುಗಳು. ಅವುಗಳೊಂದಿಗೆ ಬೆಸೆದ ಬಾಂಧವ್ಯದ ನೆನಪುಗಳು. ಈಗ ಮನೆಯೇ ಕಳೆದುಕೊಳ್ಳಬೇಕಾಗುತ್ತದೆಯೆಂದರೆ ಬಹಳ ದುಃಖವಾಗುತ್ತಿದೆ. ಎರಡೂ ಕೈ ಮುಗಿದು ಎಲ್ಲ ದೇವರುಗಳಿಗೆ ನಮಸ್ಕಾರ ಮಾಡತೊಡಗಿದೆ.**



ಮಾಡಬೇಕಿರುವುದರಿಂದ ಬೆಳಗ್ಗೆ ಆರು ಗಂಟೆಗೆ ಆಫೀಸಿನ ಕೆಲಸವೆಂದು ಅಲಾರಾಂ ಇಟ್ಟುಕೊಂಡು ಎದ್ದು ಅರ್ಧರಾತ್ರಿಯವರೆಗೂ ಆ ರೂಮಿನಲ್ಲೇ ಕಳೆಯುತ್ತಾನೆ. ಯಾವಾಗಲೋ ಹೊಟ್ಟೆ ಚುರುಗುಟ್ಟಿದಾಗ 'ತಿನ್ನಲು ಏನಿದೆ?' ಎಂದು ಬರುತ್ತಾನೆ. ಆ ಸ್ವಲ್ಪ ಹೊತ್ತೂ ಕಿವಿಯಲ್ಲಿ ಇಯರ್ ಫೋನ್ ತಗುಲಿಸಿಕೊಂಡು ಯಾವುದೋ ಮೀಟಿಂಗ್ ಅಟೆಂಡ್ ಮಾಡುತ್ತಲೇ ಗಬಗಬನೆ ತಿಂದ ಶಾಸ್ತ್ರ ಮಾಡಿ ಮತ್ತೆ ರೂಮಿಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ.

ಎರಡು ದಿನಕ್ಕೋ ಮೂರು ದಿನಕ್ಕೋ ನೆನಪಾದಾಗ ಸ್ನಾನ.

ಭುಜದವರೆಗೂ ಬೆಳೆದಿರುವ ಕೂದಲು, ಮುಖದ ತುಂಬಾ ಗಡ್ಡ. ಆರು ತಿಂಗಳಿಗೆ ಸನ್ಯಾಸಿಯಂತೆ ಕಾಣತೊಡಗಿದ.

ಗ್ಲಾಸ್ ಡೋರ್‌ನ ತೆಳುವಾದ ಪರದೆಯಿಂದ ಶಶಾಂಕ್ ಇನ್ನೂ ಹಾಗೇ ತಲೆ ಮೇಲೆ ಕೈಹೊತ್ತು ಮಲಗಿರುವುದು ಕಾಣುತ್ತಿದೆ. ನಾನು ಲ್ಯಾಪ್‌ಟಾಪ್ ತೆರೆದು ಬಾಡಿಗೆಗೆ ಹತ್ತಿರದಲ್ಲಿ ಯಾವುದಾದರೂ ಮನೆಯಿದೆಯೇ ಎಂದು ಎಯಿರ್ ಬೀ ಎನ್ ಬೀ ವೆಬ್‌ಸೈಟ್ ಜಾಲಾಡಿದೆ.

ಮನೆಯ ನೆನಪಾದ ಕೂಡಲೇ ಮನಸೆಲ್ಲ ಸೋತುಹೋಗುತ್ತಿದೆ.

ಕ್ಯಾಲಿಫೋರ್ನಿಯಾದಲ್ಲಿ, ಅದರಲ್ಲೂ ಸ್ಯಾನ್‌ಫ್ರಾನ್ಸಿಸ್ಕೊ ಬೇ ಏರಿಯಾದಲ್ಲಿ ನಮ್ಮ ಅಮ್ಮುಲು ಮನೆ ಕೊಂಡುಕೊಂಡಿದ್ದಾಳೆಂದರೆ ತಮಾಷೆಯಲ್ಲ ಎಂದು ನನ್ನೊಂದಿಗೆ ಫೋನಿನಲ್ಲಿ ಮಾತನಾಡುತ್ತ ಪಕ್ಕದಲ್ಲಿರುವವರಿಗೆ ಅಮ್ಮ ಪದೇ ಪದೇ ಹೆಮ್ಮೆಯಿಂದ ಹೇಳುವುದನ್ನು ಸಾಕಷ್ಟು ಬಾರಿ ಕೇಳಿ ನನ್ನಲ್ಲೇ ನಗುತ್ತಿದ್ದರೂ, ಒಳಗೊಳಗೇ ಹೆಮ್ಮೆಯಾಗುತ್ತಿತ್ತು. ಅಮ್ಮ ಹೇಳಿದಂತೆ ಸ್ಯಾನ್‌ಫ್ರಾನ್ಸಿಸ್ಕೊ ಬೇ ಏರಿಯಾದಲ್ಲಿ ಸಮುದ್ರಕ್ಕೆ 50 ಮೈಲಿ ದೂರದಲ್ಲಿ ಬೆಟ್ಟದಲ್ಲಿರುವ ಊರಿದು.

ಶಶಾಂಕ್ ಆಫೀಸಿಗೆ ದೂರವಾದರೂ ನಮ್ಮ ಕೋರಿಕೆಯಂತಿರುವ ಈ ಮನೆಗೆ ಬಂದೆವು.

ಬ್ರೋಕರ್ 'ನಿಮ್ಮ ಬಜೆಟ್‌ನಲ್ಲಿ ಬ್ರಹ್ಮಾಂಡವಾದ ಮನೆ ತೋರಿಸುತ್ತೇನೆ ಬನ್ನಿ' ಎಂದು ಕರೆದುಕೊಂಡು ಬಂದಾಗ ಮನೆ ನೋಡಿದ ಕೂಡಲೇ ನಮ್ಮಿಬ್ಬರಿಗೂ ತುಂಬಾ ಇಷ್ಟವಾಯಿತು. ನಾವು ಎಷ್ಟೋ ವರ್ಷಗಳಿಂದ ಕನಸು ಕಾಣುತ್ತಿದ್ದಂತೆಯೇ ಇರುವ ಮನೆ.

ಹೈ ರೂಫ್ ಲಿವಿಂಗ್ ರೂಮ್, ಕಿಚನ್‌ನಲ್ಲಿ ಐಲ್ಯಾಂಡ್, ವಿಶಾಲವಾದ ಮಾಸ್ಟರ್ ಬೆಡ್ ರೂಮ್, ದೊಡ್ಡ ಟಬ್, ವಾಕಿನ್ ಕ್ಲಾಜೆಟ್ – ಒಂದೇ ಎರಡೇ, ಜಾಗ ಕೊಂಡು ಕಟ್ಟಿಸಿದರೂ ಹೀಗೇ ಇರುತ್ತಿತ್ತು. ಮುಖ್ಯವಾಗಿ ಬಾಲ್ಕನಿ ತೆಗೆಯುತ್ತಿದ್ದಂತೆ ಚಾಚಿದರೆ ಕೈಗೆ ಸಿಗುವಂತೆ ದಟ್ಟವಾದ ಹುಲ್ಲು ಗುಡ್ಡ. ಗಾಳಿಗೆ ಅಲೆಗಳಂತೆ ತೇಲುವ ನವಿರಾದ ಗೊಂಚಲುಗಳುಳ್ಳ ಬಹಳ ಸುಂದರವಾದ ಹುಲ್ಲು. ಮನೆಯ ಸುತ್ತಲೂ ವಿಶಾಲವಾದ ಜಾಗ, ಒತ್ತಾಗಿ ಬೆಳೆದಿರುವ ಕಿತ್ತಳೆ, ನಿಂಬೆ ಹಣ್ಣಿನ ಗಿಡಗಳು.

ಮನೆ ನೋಡಲು ಬಂದಿದ್ದಾಗ ಕಿತ್ತಳೆ ಗಿಡದ ಬಳಿ ಓಡಿಹೋಗಿ ಅವನ್ನು ಉತ್ಸಾಹದಿಂದ ನೋಡುತ್ತಿದ್ದ ನನಗೆ ನಾವು ಮೊದಲು ನೋಡಬೇಕಾದ್ದು ಮನೆ, ಗಿಡಗಳಲ್ಲ ಎಂದು